*ಹೆಚ್.ಎನ್.ವಿಶ್ವನಾಥ್, ಶಿವಮೊಗ್ಗ*

*ಖಜಾನೆ ಖಾಲಿಯಾಗಿದೆ ಎಂದರು ವಿರೋಧಪಕ್ಷದವರು; ಭರ್ತಿ ಇದೆ ಎಂದರು ಮುಖ್ಯಮಂತ್ರಿಗಳು. ಯಾರು ಸರಿ?*



ಇಬ್ಬರೂ ಸರಿಯೇ. ಅವರು ಹೇಳುತ್ತಿರುವುದು ಸರ್ಕಾರದ ಖಜಾನೆಯದ್ದಲ್ಲ; ತಮ್ಮ ತಮ್ಮ ಸ್ವಂತದ್ದು!

*ಶಿರಾಲಿ ದೀಪಕ್ ಆರ್ ಶೇಟ್, ಬೆಂಗಳೂರು*

*ಸರ್ಕಾರಿ ಕೆಲಸದಲ್ಲಿರುವ ಗಂಡಸು ಸತ್ತರೆ ಹೆಂಡತಿಗೆ ಪೆನ್ಷನ್; ಹೆಣ್ಣು ಸತ್ತರೆ ಗಂಡನಿಗೇಕಿಲ್ಲ?*

ಹಾಗಾದಲ್ಲಿ ಟೆನ್ಷನ್ ಇಲ್ಲದೆ ಪೆನ್ಷನ್ ಪಡೆಯಲು ಗಂಡನೇ ಹೆಂಡತಿಗೆ ಗಂಡಾಂತರವಾದಾನೆಂಬ ಭಯವಂತೆ!

*ವಿ.ಹಮೀದ್, ವಿಟ್ಲ*

*ವಿವಾಹಿತೆ ವಿವಾಹಿತರಲ್ಲಿ ಪ್ರೀತಿ ತೋರಿಸುತ್ತಾಳಲ್ಲಾ, ಏಕೆ?*

ಅದು ಪ್ರೀತಿಯಲ್ಲ, ಅನುಕಂಪ. ಸಮಾನದುಃಖಿಗಳಲ್ಲಿ ಇದು ಸಹಜ.

*ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ*

*ನೀವು ಯಾವ ರಾಮ್? ನಾಥೂರಾಮ್, ಹೇ ರಾಮ್, ಜೈ ಶ್ರೀರಾಮ್, ಆರಾಂ, ಹರಾಂ, ರಾಂರಾಂ? ಯಾವುದು ಹೇಳಿ?*




ಯಾವುದೂ ಅಲ್ಲ; ಹಾಸ್ಯದ ಜಾಡು ಹಳಿ ತಪ್ಪದಿರಲು ಜಾಗೃತವಾಗಿರಬಯಸುವ ಅಲಾರಾಂ!

*ಡಿ.ಎಸ್.ಪಂಕಜಸುಬ್ರಮಣ್ಯ, ಬೆಂಗಳೂರು*

*ಮೆಚ್ಚಿ ಮದುವೆಯಾದ ಮೇಲೆ ವಿವಾಹ ವಿಚ್ಛೇದನವೇಕೆ?*

ಮದುವೆ ಮುನ್ನ ಮೆಚ್ಚಬಲ್ಲ ಅಂಶಗಳು ಗೋಚರವಾದರೆ ನಂತರ ಬೆಚ್ಚಬಲ್ಲ ಅಂಶಗಳು ಗೋಚರವಾಗುವುದರಿಂದ!

*ಮಲ್ಲಿಕಾರ್ಜುನ ಗಚ್ಚಿ, ಗೋಗಿ*

*ಸರ್ಕಾರದ ಖಾತ್ರಿ ಯೋಜನೆಯನ್ನು ಖಾತ್ರಿಯಿಲ್ಲದ ಜನ ಮಾಡುತ್ತಿರುವಾಗ ಪೂರ್ಣಗೊಳ್ಳುವುದೇ?*

ಖಾತ್ರಿ ಎಂದರೆ ಮೂರೂ ಪಕ್ಷದವರು(ತ್ರಿ) ಕಬಳಿಸುವುದು(ಖಾ) ಎಂದು ಹಿಂಗ್ಲಿಷ್‌ನ ಅರ್ಥವಂತೆ; ಆ ರೀತಿಯಲ್ಲಿ ಅದು ಪೂರ್ಣವಾಗುವುದು ಖಾತ್ರಿ!

*ರಾಜೀವಕುಮಾರ ಬಿ ಪೂಜಾರ, ಮಾಗಳ*

*ಚಂದ್ರೋದಯ, ಅರುಣೋದಯ ಒಟ್ಟಿಗೆ ಸೇರುತ್ತಾ?*

ಸೂರ್ಯೋದಯವೂ ಸೇರುತ್ತೆ. ಈ ಮೂರೂ ಹೆಸರಿನ ಭವನಗಳು ಬನ್ನೇರುಘಟ್ಟ ರಸ್ತೆಯಲ್ಲಿ ಒಟ್ಟೊಟ್ಟಿಗೆ ಸೇರಿದಂತೆಯೇ ಇವೆ!

*ನೆ.ಸು.ಆನಂದ್, ಕತ್ರಿಗುಪ್ಪೆ*

*ಇಲ್ಲೊಬ್ಬ ಪೇಪರ್ ಕಂಡೊಡನೆ ಹರಿಯುತ್ತಾನಲ್ಲಾ...?*

ಹಾಳೆಯ ಮೇಲೆ ಬರೆಯುವ ಮುನ್ನವೇ ಬರೆಯಲ್ಪಡುವುದರ ಯೋಗ್ಯತೆ ತಿಳಿದುಬಿಡುತ್ತದೋ ಏನೋ... ಯಾರೋ ಬಹಳ ಮುಂದುವರಿದ ವಿಮರ್ಶಕನಿರಬೇಕು!

*ಗೀತಾ ಬಿರ್ಲ, ಬೆಂಗಳೂರು*

*ಕಲಾವಿದರ ಬದುಕಿನಲ್ಲಿ ಕಷ್ಟ ಕಾರ್ಪಣ್ಯಗಳೇ ಜಾಸ್ತಿಯಂತೆ; ಏಕೆ?*

ಕಲೆಗೆ ಭಲೆ ಎನ್ನುವರು ದೊರೆತರೂ ಬೆಲೆ ಅರಿತವರು ಸಿಗದಿರುವುದರಿಂದ!

*ಹಾಡ್ಯ ಜಯಾನಂದ, ಮೈಸೂರು*

*ಅಪ್ಪಟ ಕನ್ನಡದ ಮಣ್ಣಿನ ಮಕ್ಕಳು ಇಂಗ್ಲಿಷ್ ಬಯ್ಗುಳ ಉಪಯೋಗಿಸುತ್ತಾರಲ್ಲಾ, ಏಕೆ?*

ಕನ್ನಡದಲ್ಲೇ ಬೈದರೆ ಅರ್ಥವಾಗಿಬಿಡುವುದರಿಂದ!

*ಮುರಲೀಧರ ಕುಲಕರ್ಣಿ, ಬೀದರ್*

*ಪ್ರೀತಿಯನ್ನು ವ್ಯಕ್ತಪಡಿಸಲು ಒಂದು ದಿನ ಸಾಕೆ?*

ಒಂದೇ ನೋಟ ಸಾಕು!

*ಪೂರ್ಣಿ, ಹೊಲನಗದ್ದೆ*

*ಒಂದು ಹುಡುಗ ಹುಡುಗಿ ಮಾತನಾಡುವುದು ಕೂಡಾ ಅಪರಾಧವಾ?*

ಖಂಡಿತ ಅಲ್ಲ; ಆದರೆ ಗುಸುಗುಸುವಿನ ಬದಲು ಪಟಪಟ ಉತ್ತಮ.

*ಎಂ.ಬಿ.ಖೋದಾನಪುರ, ಸವದತ್ತಿ*

*ವೇಶ್ಯಾವೃತ್ತಿಗೆ ಕೊನೆ ಇದೆಯೆ?*

ಖಂಡಿತ! ಜಗದ ಕೊನೆಯ ಗಂಡು ಸತ್ತ ತಕ್ಷಣ ವೇಶ್ಯಾವೃತ್ತಿ ಕೊನೆಯಾಗಿಬಿಡುತ್ತದೆ.

## ಬಹುಮಾನಿತ ಪ್ರಶ್ನೆ

*ರವಿ ಎಂ. ಪೈ. ಹೊನ್ನಾವರ*

*ಶಿವ ಶಿರದಲ್ಲಿ ಗಂಗೆಯನ್ನು, ಮುಡಿಯಲ್ಲಿ ಶಶಿಯನ್ನು ಏಕೆ ಧರಿಸಿದ?*

ಪಾರ್ವತಿ ಮಾಡುವ ತಲೆಬಿಸಿಗೆ ಇಷ್ಟಾದರೂ ತಂಪು ಮಾಡಿಕೊಳ್ಳಲೇಬೇಕಿತ್ತಂತೆ!

*ಹನುಮನಾಳು ರಮೇಶ್, ಬನ್ನೂರು*

*ದೇವರಿಗೆ 108 ಅಷ್ಟೋತ್ತರ ಹೇಳುವುದು, ಆಸ್ಪತ್ರೆಯ ತುರ್ತುವಾಹನದ ಸಂಖ್ಯೆ 108ರಲ್ಲಿ ಚಲಿಸುವುದು; ಯಾವುದು ಉತ್ತಮ?*

ಆ ವಾಹನಚಾಲಕನಿಗೆ ಅಷ್ಟೋತ್ತರದ ಕ್ಯಾಸೆಟ್ ನೀಡಿ, ನೆಮ್ಮದಿಯಿಂದ ಕೂಡುವುದು ಉತ್ತಮ.

*ಶ್ರೀಮತಿ ಸುನಂದಮ್ಮ, ಗೌರಿಬಿದನೂರು*

*ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಗಂಡುಹುಡುಗರಿಗೇ ಚಟಗಳು, ವ್ಯಸನಗಳು ಇರಲು ಕಾರಣವೇನು?*

ಗಂಡಸರಿಗೆ 67% ಮೀಸಲಾತಿ; ಹೆಂಗಸರಿಗೆ 33% ಎಂಬುದನ್ನು ಇಲ್ಲೂ ಅನುಸರಿಸುವುದರಿಂದ!

*ವಿನುತಾ ಡಿ. ಪುತ್ತೂರು*

*ಕನ್ನಡ ಚಿತ್ರರಂಗ ಇನ್ನೂ ಮರ ಸುತ್ತುವುದರಲ್ಲೇ ಇದೆಯಲ್ಲಾ, ಯಾಕೆ?*

ಇರಲಿ ಬಿಡಿ. ಆ ಕಾರಣದಿಂದಲಾದರೂ ಮರಗಳು ಉಳಿದಿರುತ್ತವೆ!

*ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ*

*ಪೂರ್ವಜನ್ಮದಲ್ಲಿ ನೀವು ಏನಾಗಿದ್ದಿರಿ ದೇವರೂ?*

ಪಾಂಡವರಿಗೆ ಪ್ರಶ್ನೆ ಕೇಳಿ ಗೋಳಾಡಿಸಿದ ಯಕ್ಷ!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*

*ಮಂತ್ರಿಗಳ ಮಕ್ಕಳು ಸೈನ್ಯಕ್ಕೆ ಏಕೆ ಸೇರುವುದಿಲ್ಲ?*

ಸೇರದೆ ಏನು... ಶ್ರೀರಾಮಸೇನೆ, ಶಿವಸೇನೆ...

*ಕೌಶಿಕ್‌ರಾಜ್, ಹನುಮನಾಳು*

*ಎಲ್ಲೋ ಮಳೆಯಾಗಿದೆ ಎಂದು ಇಲ್ಲೊಬ್ಬಳು ನನ್ನನ್ನು ಕಂಡಾಗಲೆಲ್ಲಾ ಹಾಡುವಳಲ್ಲಾ...?*

ಛತ್ರಿಗಳನ್ನು ಕಂಡಾಗ ಮಳೆಯ ನೆನಪಾಗುವುದು ಸಹಜ!

*ಎ.ಕೆ.ಪಟ್ಟಾಭಿ, ಬೆಂಗಳೂರು*

*ಹೆಣ್ಣಿಗೆ ಅವಳ ಮುಖವೇ ಸರ್ಟಿಫಿಕೇಟು ಎಂದರು ಬೀಚಿ; ಗಂಡಿಗೆ ಅವನ ಮುಖವೇ...?*



(ರಿ)ಮಾರ್ಕ್ಸ್ ಕಾರ್ಡು!

■ ರಾಮ್